**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 298/2020**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ಧ //**

**ಆರೋಪಿ ಃ ಬಸವರಾಜ**

**ಆಪಾದನೆ**

| | |
|---|---|
| ಆರೋಪಿ. | ಬಸವರಾಜ ತಂದೆ ಚಂದಯ್ಯಾ ಕಟ್ಟಿಮನಿ, ವಃ 65 ವರ್ಷ, ಉಃ ಕಿರಣಿ ಅಂಗಡಿ, ಸಾಃ ಯರಗೋಳ ಗ್ರಾಮ ತಾಃ ಮತ್ತು ಜಿಃ ಯಾದಗಿರಿ |

ಮೊದಲನೆಯದಾಗಿ ದಿನಾಂಕಃ 15-01-2020 ರಂದು 07-15 ಪಿ.ಎಂ ಸುಮಾರಿಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆಯ ಹದ್ದಿಯಲ್ಲಿ ಬರುವ ಯರಗೋಳ ಗ್ರಾಮದಲ್ಲಿ ಕಿರಣಿ ಅಂಗಡಿಯಲ್ಲಿ ಆರೋಪಿಯಾದ ನೀನು ಮದ್ಯವನ್ನು ಮಾರಾಟ ಮಾಡಲು ಇಟ್ಟಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಯರಗೋಳ ಗ್ರಾಮದಲ್ಲಿ ಕಿರಣಿ ಅಂಗಡಿಯಲ್ಲಿ 3059.13/- ರೂಪಾಯಿ ಮದ್ಯದ ಬಾಟಲಿಗಳನ್ನು ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 07.12.2024**

**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**